# ಕರುಣೆ ಇದ್ದರೆ?

★ ಬಿ.ಪಿ. ಶಿವಾನಂದ ರಾವ್




ಸೊಸೆ ಮಾಲತಿ ಎಂದರೆ ನೆಲ್ಲೆಕೇರಿಯ ಆರ್ನೇ ಕ್ರಾಸ್‌ನಲ್ಲಿ ಎಡದಿಂದ ಮೂರ್ನೇ ಮನೆ 'ಶುಭೋದಯ'– ಬೋರ್ಡ್ ಕಾಂಪೌಂಡ್ ಗೋಡೆಯಲ್ಲಿ ಅಮೃತಶಿಲೆಯಲ್ಲಿ ಕೆತ್ತಿಸಿಟ್ಟ ಮಜಬೂತ್ ಹೆಸರು. ಅದು ಒಂಟಿ ಸ್ವತಂತ್ರ 16 ಗುಂಟೆಯ ಜಾಗದಲ್ಲಿ ಮಾಲತಿಯ ಮಾವ ಬಾಬುರಾಯರು ಸರಿಸುಮಾರು 1968–69ರ ಇಸವಿಯಲ್ಲಂತೆ ಕಟ್ಟಿಸಿದ್ದು. ಬೋಟಿ ವ್ಯಾಪಾರಿ ಪುರುಷೋತ್ತಮ ನಾಯಕರಿಂದ ಎಂಟು ಸಾವಿರ ರೂಪಾಯಿಗೆ ಎಂಟು ತೆಂಗು, ಹಲಸು, ಮಾವು, ಪೇರಲ ಮರ, ಬಾವಿ, ಕಾಂಪೌಂಡ್, ಬೀಳಲು ಸಿದ್ಧವಾಗಿದ್ದ 'ರೀಪು–ಪಕಾಸಿಯದೊಂದು ಔಟ್ ಹೌಸ್, ಖಾಲಿಯದು (ಕಟ್ಟಿಗೆ, ಹುಲ್ಲು, ಹೆಂಚು, ಕಲ್ಲು ಮಳೆಗಾಲದಲ್ಲಿ ತುಂಬಿಡಲಿಕ್ಕಂತೆ ಕಟ್ಟಿದ್ದಿದು) ಎಲ್ಲ ಕುಂತ ಬೈಠಕ್‌ಗೆ 16 ಗುಂಟೆ ಭೂಮಿಯನ್ನು ನಾಯಕರು ಮಾರಿ ಹಾಕಿ ಕ್ರಯಪತ್ರ ಬರೆದು ಕೊಟ್ಟೇ ವಾರದಲ್ಲಿ ಮುಂಬೈನ ಅಂಧೇರಿ ವೆಸ್ಟ್‌ನಲ್ಲಿದ್ದ ಮಗ್ಳು ಸುಲೋಚನಾಳ ಮನೆಗೆ ನಡೆದರೂಂತಾ ಅವರ ಅವತ್ತಿನ ಫಟಾಫಟ್ ಯಾತ್ರೆಯ ಕಥೆ ಈಗ್ಲೂ ಬೊಚ್ಚು ಬಾಯಿಯವರಲ್ಲಿ ಚಾಲ್ತಿಯಲ್ಲಿದೆ.

ಸುಧಾಕರ ಅಂದರೆ ಬಾಳಿಗಾ ಕಾಲೇಜ್ನಲ್ಲಿ ಲೆಕ್ಚರರ್, ಆ ಶುಭೋದಯದಲ್ಲಿ ಬಾಬುರಾಯ್ರು, ಬಾಬಣ್ಣೆ, ಬಾಬು, ಬಾಬುರಾವ್ ಹೆಸ್ರಿಂದ ಜನಪ್ರಿಯರು. ಆ ಮನೆ ಅವ್ರು ಹೊಕ್ಕ ಲಾಗಾಯ್ತು ಒಂದು ದಿನಾನೂ ನೆಟ್ಟಗೆ ನಿಶ್ಚಿಂತೆಯಿಂದ ನಿದ್ದೆ ಮಾಡಿದ್ದ ದಾಖಲೆನೂ ಇಲ್ಲ, ನೆನಪೂ ಇಲ್ಲ, ಮನೆ ಎಷ್ಟು ಗಟ್ಟಿ ಮಜಬೂತಾಗಿದ್ದರೂ ಅದು ಅವರ ತುಂಬು ಕುಟುಂಬವನ್ನು ಛಿದ್ರ ಮಾಡಿತ್ತು! ಎಂಟು ತಿಂಗಳಾಯ್ತು. ಹೆಂಡತಿಗೆ ಸೊಸೆ ಮಾಲತಿ ಕುಂತಲ್ಲಿ ನಿಂತಲ್ಲಿ ವಕ್ರಿಸಿದಾರೆಂಬಂತೆ ಮಾಡ್ತಾಳೇನೋ ಎಂತಿದ್ದರೆ ಉಹುಂ! ಮಾಲತಿ ಎಂ.ಎ. ಪದವೀಧರೆ. ತನ್ನ ಕಲ್ಪನೆನೇ ಅಸಂಬದ್ಧದ್ದು ಎಂಬಂತೆ ಆಕೆ ಹಸನ್ಮುಖಿ ಮೂರ್ತಿನೇ. ಬಿಚ್ಚು ಮನಸ್ಸಿನ ಸ್ಪಷ್ಟ ನಿಲುವಿನ ಪದವೀಧರೆ ದಿಟ್ಟೆ, ಹಾಗಂತ ಫ್ಯಾಷನ್ ಕಮ್ಮಿ.

'ಅಮ್ಮಾ... ನಂಗ್ಯಾಕೋ ಮಸ್ತ್ ಫ್ಯಾಷನ್ ಇಷ್ಟ ಆಗಲ್ಲಾ.' ಅಂದಿದ್ದಳು. ಅತ್ತೆ ಭವಾನಿಗೇ ಅಚ್ಚರಿ. ಈಗಿನ್ಕಾಲ್ದಲ್ಲಿ ಅದ್ರಲ್ಲೂ ಎಂಎ ಪಾಸ್ಮಾಡಿದ್ದವ್ಳು... ಇಷ್ಟು ಸರಳಾನಾ!? ಅಂತಾ. ಮಾಲತಿ 'ಶುಭೋದಯ'ದಿಂದ ಹೊರ ಬೀಳುವ ಹೊತ್ತಲ್ಲೆಲ್ಲ ಸೀರೆ ಉಟ್ಟು ಹೊರ್ಡ್ರೋ ಸಂಭ್ರಮ ದೃಶ್ಯ–ಭವಾನಿ ಇವ್ಳು ಒಂದ್ ಥರಾ ಸಮನ್ವ್ಯಾತ್ಮಕ ಹೆಣ್ಣು' ಅಂತಾ ಗುಣಾಕಾರ ಹಾಕಿಬಿಟ್ಟಳು.

ಗಂಡ ಸುಧಾಕರ ಹಾಗಲ್ಲಾ. ಹೆಂಡ್ತಿ ನಯನ ಮನೋಹರೆ ಚೆಲುವಿನ ಖನಿ, ವೈಯ್ಯಾರದಲ್ಲಿ ಶೃಂಗರಿಸ್ಕೊಂಡು ತನ್ನ ಜೊತೆ ತಾನು ಪೇಟೆಗೆ ಶಾಂತೇರಿ ಕಾಮಾಕ್ಷಿ, ವೆಂಕಟ್ರಮಣ, ಶಾಂತಿಕಾ ಪರಮೇಶ್ವರಿ ದೇವಾಲಯ, ಅರಬ್ಬಿ ಕಡಲ ದಂಡೆ, ಅಘನಾಶಿನಿ, ನದಿ ದಂಡೇಲ್ಲಿ ಲಾಂಚ್ ಪಯಣ ಅಂತಾ ಹಿಗ್ಗಲ್ಲಿ